Sri SYDNEY A. THOMAS.—Will the Government be pleased to state when these scales of pay came into force?

Sri T. CHANNIAH.—Notice.

Sri SYDNEY A. THOMAS.—Are there any proposals before the Government to enhance the present scales?

Sri T. CHANNIAH.—There are no such proposals at present.

Sri SYDNEY A. THOMAS.—Are the Government aware that ration allowances are not paid to nurses while on leave?

Sri T. CHANNIAH.—Notice.

Sri SYDNEY A. THOMAS.—Does this ration allowance also include the dhobi allowance?

Sri T. CHANNIAH.—I cannot answer offhand. I believe it is included.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆಸ್ಪತ್ರೆಯ ನರ್ಸುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರನ್ನು ಚುನಾಯಿಸುವವರು ಯಾರು?

ಶ್ರೀ ಟಿ. ಚೆನ್ನಯ್ಯ.—ಇಲಾಖಾ ಅಧಿಕಾರಿಗಳು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರಲ್ಲಿ ಕುರೂಪಿಗಳಾಗಿರುವವರೇ ಬಹಳ ಜನರಿದ್ದಾರೆ. ಅವರನ್ನು ತಪ್ಪಿಸುವುದಕ್ಕೆ ಸಾಧ್ಯವೇ! (ನಗು)

(No answer)

Irregularities in the Chikballapur Town Municipality.

Q.—517. Sri G. PAPANNA (Sidlaghatta-Chikballapur).—

Will the Government be pleased to state:—

(*a*) whether it has come to their notice that the funds of the Chikballapur Town Municipality have been spent unauthorisedly;

(*b*) if so, what is the action taken?

A.—Sri T. CHANNIAH (Minister for Public Health and Local Self-Government).—

(*a*) Sri T. S. Venkataramaniah and other four Municipal Councillors have presented a petition to Government and the Deputy Commissioner alleging certain irregularities on the part of the President in executing improvement works and this petition has been forwarded to the Deputy Commissioner for report after investigation.

(*b*) A detailed enquiry was held in the matter on the 20th February 1953, and as a result a list of certain specific irregularities was drawn up for taking necessary further action and further report is due to Government.

ಶ್ರೀ ಜಿ. ಪಾಪಣ್ಣ.—ಶ್ರೀಮಾನ್ ವೆಂಕಟರಮಣಯ್ಯನವರಿಂದಲೂ ಮತ್ತು ಇತರ ನಾಲ್ಕು ಕೌನ್ಸಿಲರುಗಳಿಂದಲೂ ಅರ್ಜಿಗಳು ಯಾವಾಗ ಬಂದವು?

ಶ್ರೀ ಟಿ. ಚನ್ನಯ್ಯ.—ಬಂದ ತಾರೀಖು ಗೊತ್ತಿಲ್ಲ.

ಶ್ರೀ ಜಿ. ಪಾಪಣ್ಣ.—ಅರ್ಜಿಗಳ ಮೇಲೆ ತಾರೀಖು ಹಾಕಿ ಕಳುಹಿಸಿಲ್ಲವೇ?

ಶ್ರೀ ಟಿ. ಚೆನ್ನಯ್ಯ.—ಇರಬಹುದು.

ಶ್ರೀ ಜಿ. ಪಾಪಣ್ಣ.—ಎಷ್ಟು ಹಣ ಆ ರೀತಿಯಾಗಿ ಅನಧಿಕೃತವಾಗಿ ಖರ್ಚಾಗಿದೆಯೆಂದು ಗೊತ್ತಾಗಿದೆ?

Sri T. CHANNIAH.—I want notice.

ಶ್ರೀ ಜಿ. ಪಾಪಣ್ಣ.—ತಾವು (b) ಪ್ರಶ್ನೆಗೆ ಉತ್ತರದಲ್ಲಿ "ಅಕ್ರಮ ವರ್ತನೆಗಳು ನಡೆದ ಕೆಲವು ನಿರ್ದಿಷ್ಟ ಸಂದರ್ಭಗಳನ್ನು ಪಟ್ಟಿಮಾಡಲಾಯಿತೆಂದು ಹೇಳಿದ್ದೀರಿ. ಹಾಗಾದರೆ ತಮಗೆ ವರದಿಯೇ ಬರದೆ ಯಾವ ರೀತಿ ಇಂಥ ಉತ್ತರವನ್ನು ಕೊಟ್ಟಿರಿ?

ಶ್ರೀ ಟಿ. ಚೆನ್ನಯ್ಯ.—ಇದರ ವಿಚಾರದಲ್ಲಿ ಡೆಪ್ಯುಟಿ ಕಮಿಷನರು ಇನ್ನೂ ಮತ್ತೆ enquiry ಮಾಡುತ್ತಿದ್ದಾರೆ. ಆ ತನಿಖೆಯ ವಿಚಾರದಲ್ಲಿ ವರದಿ ಬಂದನಂತರ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದಿದ್ದಾರೆ.

ಶ್ರೀ ಜಿ. ಪಾಪಣ್ಣ.—ಅದಲ್ಲ ನಾನು ಕೇಳುವುದು. ತಾವಿಲ್ಲಿ ಫೆಬ್ರುವರಿ 20ನೆಯ ತಾರೀಖು ಪರಿಶೀಲನೆ ನಡೆಸಿ, ಅಕ್ರಮ ವರ್ತನೆಗಳ ಪಟ್ಟಿ ಮಾಡಲಾಯಿತೆಂದು ತಿಳಿಸಲು ವರದಿಯೇ ನಿಮ್ಮ ಮುಂದಿಲ್ಲದೆ ಹೇಗೆ ಸಾಧ್ಯವಾಯಿತು?

ಶ್ರೀ ಟಿ. ಚನ್ನಯ್ಯ.—ಡೆಪ್ಯುಟಿ ಕಮಿಷನರು ಹಿಂದು ಪ್ರಿಲಿಮಿನರಿ ವರದಿಯನ್ನು ಲೋಕಲ್ ಸೆಲ್ಫ್ ಗೌರ್ನಮೆಂಟ್ ಕಮಿಷನರಿಗೆ ಕಳುಹಿಸಿದ್ದಾರೆ. ಅದರ ಆಧಾರದ ಮೇಲೆ ಈ ಉತ್ತರ ಕೊಟ್ಟಿದೆ.

ಶ್ರೀ ಜಿ. ಪಾಪಣ್ಣ.—ಈ ಪ್ರಿಲಿಮಿನರಿ ವರದಿಯಲ್ಲಿ ಇಂಥ ಎಷ್ಟು ಸಂದರ್ಭಗಳನ್ನು ತೋರಿಸಿದ್ದಾರೆ?

ಶ್ರೀ ಟಿ. ಚೆನ್ನಯ್ಯ.—ವಿವರಗಳು ಗೊತ್ತಿಲ್ಲ. ಬಂದ ಮೇಲೆ ಹೇಳುತ್ತೇನೆ.

ಶ್ರೀ ಜಿ. ಪಾಪಣ್ಣ.—ಪ್ರಿಲಿಮಿನರಿ ಪಟ್ಟಿಯ ಪ್ರಕಾರವೇ ಎಷ್ಟು ಸಂದರ್ಭಗಳನ್ನು ನಮೂದಿಸಿದ್ದಾರೆ; ಮತ್ತು ಎಷ್ಟು ಹಣವನ್ನೊಳಗೊಂಡಿದೆ?

ಶ್ರೀ ಟಿ. ಚನ್ನಯ್ಯ.—ನೋಡಿ ಹೇಳಬೇಕು.

ಶ್ರೀ ಜಿ. ಪಾಪಣ್ಣ.—ನಾನು ಪ್ರಶ್ನೆ ಸಕಾಲದಲ್ಲಿ ಕಳುಹಿಸಿದ ಮೇಲೆ ಸಂಬಂಧಪಟ್ಟ ಉತ್ತರಗಳನ್ನೆಲ್ಲಾ ತೆಗೆದಿಟ್ಟುಕೊಂಡಿರಬೇಕಲ್ಲವೇ?

ಶ್ರೀ ಟಿ. ಚನ್ನಯ್ಯ.—ತಾವು ಕೇಳುವ ತಪಶೀಲುಗಳನ್ನೆಲ್ಲಾ ಕೂಡಲೆ ತಿಳಿಸುವುದಕ್ಕಾಗುವುದಿಲ್ಲ.

ಶ್ರೀ ಜಿ. ಪಾಪಣ್ಣ.—ತಾವೀಗ ಉತ್ತರ ಕೊಡುವ ರೀತಿ ಮತ್ತು ಈ ವಿಚಾರದಲ್ಲಿ ಸಾವಕಾಶವಾಗಿ ವರ್ತಿಸುತ್ತಿರುವುದು—ಇವೆಲ್ಲವನ್ನೂ ನೋಡಿದರೆ ಇವೆಲ್ಲಾ

ಉದ್ದೇಶಪೂರ್ವಕವಾಗಿಯೇ ನಡೆಯುತ್ತಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಶ್ರೀ ಎ. ಮುನಿಯಪ್ಪ.—ಮುನಿಸಿಪಲ್ ಪ್ರೆಸಿಡೆಂಟರು ಅನಧಿಕೃತವಾಗಿ ಎಷ್ಟು ಖರ್ಚು ಮಾಡಬಹುದು?

ಶ್ರೀ ಟಿ. ಚನ್ನಯ್ಯ.—ಕಾನೂನು ಪ್ರಕಾರ ಎಷ್ಟು ಖರ್ಚುಮಾಡುವುದಕ್ಕೆ ಅಧಿಕಾರವಿದೆಯೋ ಅಷ್ಟು ಖರ್ಚು ಮಾಡಬಹುದು. ಅನವಶ್ಯಕವಾಗಿ ಖರ್ಚುಮಾಡಿರುವುದೇನಾದರೂ ಸರ್ಕಾರದ ಗಮನಕ್ಕೆ ಬಂದರೆ ಸೂಕ್ತ ಕ್ರಮ ತಗೆದುಕೊಂಡು, ಸರಿಯಾದ ರೀತಿಯಲ್ಲಿ ಖರ್ಚು ಮಾಡುವಂತೆ ಸೂಚನೆ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಪ್ರೆಸಿಡೆಂಟರ ಕೈಕೆಳಗೆ ಚೀಫ್ ಆಫೀಸರುಗಳಿರುವುದರಿಂದ ಇಂಥ ಅಕ್ರಮಗಳು ನಡೆಯುವುದಕ್ಕೆ ಅವಕಾಶವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಇಂಥವು ಸರ್ಕಾರದವರ ಗಮನಕ್ಕೆ ಆಗಾಗ್ಗೆ ಬರುತ್ತಿವೆ. ಬಂದಾಗಲೆಲ್ಲಾ ಸೂಕ್ತ ಕಾರ್ಯಕ್ರಮ ಕೈಕೊಳ್ಳಲಾಗುತ್ತಿದೆ.

ಶ್ರೀ ಎ. ಮುನಿಯಪ್ಪ.—ಪ್ರತಿ ವರ್ಷವೂ ಮುನಿಸಿಪಾಲಿಟಿಗಳ ಲೆಕ್ಕಪತ್ರಗಳನ್ನು ಸರಿಯಾಗಿ ಆಡಿಟ್‌ಮಾಡಿ ಸದಿರುವುದರಿಂದ ಇಂಥ ಅವಿವೇಕಗಳು ಸ್ವಾಭಾವಿಕ ವಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೆಲವು ಮುನಿಸಿಪಾಲಿಟಿಗಳ ಲೆಕ್ಕಪತ್ರಗಳನ್ನು ಆಡಿಟ್‌ಮಾಡಲಾಗಿದೆ. ನಮಗೆ ಸಾಕಾದಷ್ಟು ಸಿಬ್ಬಂದಿಯಿಲ್ಲದಿರುವುದರಿಂದ ಎಲ್ಲ ಮುನಿಸಿಪಾಲಿಟಿಗಳನ್ನೂ ಆಡಿಟ್‌ಮಾಡಲು ಸಾಧ್ಯವಾಗಿಲ್ಲ. ಈಚೆಗೆ ಸಾಕಷ್ಟು ಸಿಬ್ಬಂದಿ ನೇಮಿಸಿ ಎಲ್ಲಾ ಮುನಿಸಿಪಾಲಿಟಿಗಳ ಲೆಕ್ಕಪತ್ರಗಳನ್ನು ಆಡಿಟ್‌ಮಾಡಲು ಏರ್ಪಾಡುಮಾಡಲಾಗಿದೆ.

Disposal of shop sites along M. G. Road margin of Chintamani Town.

Q.—626. Sri M. C. ANJANEYA REDDY (Chintamani).—

Will the Government be pleased to state :—

(*a*) the number of shop sites along the M. G. Road margin of Chintamani Town disposed of by the Municipality during the last five years ;

(*b*) the average price per sq. yard realised by this sale ?

A.—Sri T. CHANNIAH (Minister for Public Health and Local Self-Government).—

(*a*) Forty-three sites.

(*b*) Rs. 102-8-0 per square yard.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—(*b*) ಪ್ರಶ್ನೆಯ ಉತ್ತರದಲ್ಲಿ ಚ.ಗ. ಒಂದಕ್ಕೆ 102 ರೂ. 8 ಆಣೆ ಗಳಷ್ಟು ಬೆಲೆಬಾಳುತ್ತದೆಂದು ಹೇಳಿದ್ದೀರಿ. ಇಂಥ ಬೆಲೆಬಾಳುವ ಜಮೀನನ್ನು ಒಬ್ಬ ಸಾಹುಕಾರರಿಗೆ ಚ.ಗ.ಕ್ಕೆ ಐದು ರೂಪಾಯಿಗಿಂತಲೂ ಕಮ್ಮಿ ಕಿಮ್ಮತ್ತಿಗೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿಲ್ಲ. ಅವರು encroach ಮಾಡಿಕೊಂಡಿರುವ ಮುನಿಸಿಪಲ್ ನಿವೇಶನವನ್ನು ಅಪ್ರೈಟ್ ದರಕ್ಕೆ ಕೊಡಬೇಕೆಂದು ಹೇಳಿ, ಕೇಳಿ ಕೊಂಡಿದ್ದರು. ಈಗ ಹಾಗೆ ಕೊಡಕೂಡದೆಂದು stay order ಕೊಟ್ಟಿದ್ದೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ stay ಮಾಡಿದ ಮೇಲೆ ಹರಾಜಿಗಿಟ್ಟು ವಿಲೇ ಮಾಡುತ್ತೀರಾ?

ಅಧ್ಯಕ್ಷರು.—'Stay' ಮಾಡಿರುವ ಉದ್ದೇಶವೇ ಅದು.

Mr. SPEAKER.—Questions Nos. 339 and 438 maybe taken up together.

Construction of a new tank bund near Challaghatta.

Q.—339. Sri A. V. NARASIMHA REDDY (Bangalore South).—

Will the Government be pleased to state :—

(*a*) when the estimate to construct a new tank bund near Challaghatta, Kengeri Hobli, Bangalore South Taluk, was prepared ;

(*b*) the number of estimated acres that would come under irrigation ;

(*c*) the number of dry lands that go under tank bed if the tank is constructed ?

(*d*) the estimated cost of the tanks ;

(*e*) the percentage of annual return that they get if the tank is constructed ?

A.—Sri Kadidal MANJAPPA (Minister for Revenue and Public Works).—

(*a*) The estimate was prepared during the year 1947.

(*b*) The proposed atchkat under the tank is 157 acres.

(*c*) Dry lands—56 acres and 26 guntas and wet and garden lands—5 acres.

(*d*) The revised estimate will now amount to Rs. 2,13,600.

(*e*) The percentage of return is 0.55 per cent.